**ದಿನಾಂಕ 11.06.2018 ರಂದು ಸಾಕ್ಷಿಯನ್ನು ಪುನಹ ಕರೆಸಿ ಪ್ರಮಾಣೀಕರಿಸಲಾಯಿತು.**

ವಾದಿಯ ಪರವಾಗಿ **ಪಾಟೀ ಸವಾಲುಃ** ಶ್ರೀ ಹೆಚ್.ಎಸ್.ಎ **ವಕೀಲರಿಂದ**

ಚಲುವೇಗೌಡರಿಗೆ ನಾವು 3 ಜನ ಮಕ್ಕಳು. ಅವರುಗಳೆಂದರೆ ರಾಮಚಂದ್ರ, ಕೃಷ್ಣೇಗೌಡ ಮತ್ತು ಯೋಗೇಗೌಡ. ರಾಮಚಂದ್ರರವರು ಎಸ್.ಎಸ್.ಎಲ್.ಸಿ ಮತ್ತು ಪಿ.ಯುಸಿ ಓರಬಹುದು. ನಾನು 4 ನೇ ತರಗತಿಯವರೆಗೆ ಓದಿದ್ದೇನೆ. ಯೋಗೇಗೌಡ ಪಿ.ಯು.ಸಿ ವರೆಗೆ ಓದಿದ್ದಾರೆ. 1 ನೇ ಪ್ರತಿವಾದಿ ಮೊದಲು ರೇಶ್ಮೆ ಇಲಾಖೆಯಲ್ಲಿದ್ದರು ನಂತರ ಶಾಲೆಯ ಅಟೆಂಡರ್ ಆಗಿ ಕೆಲಸ ಮಾಡಿ ಈ ನಿವೃತ್ತರಾಗಿ ಮನೆಯಲ್ಲಿದ್ದಾರೆ. ರೇಶ್ಮೆ ಇಲಾಖೆಯಲ್ಲಿ 1 ನೇ ಪ್ರತಿವಾದಿ ಕೆಲಸ ಮಾಡುತ್ತಿದ್ದಾಗ ವಾಸ ಆಲಗೌಡನಹಳ್ಳಿಯಲ್ಲಿ ವಾಸ ಇದ್ದರು. ಈ ನಿವೃತ್ತಿ ಆದ ನಂತರವೂ ಆಲಗೌಡನಹಳ್ಳಿಯಲ್ಲಿ ವಾಸ ಇದ್ದಾರೆ. 1 ನೇ ಪ್ರತಿವಾದಿ ಹೊ.ನ.ಪುರ ತಾಲ್ಲೂಕು ಚಾಕೇನಹಳ್ಳಿ ಗ್ರಾಮದಲ್ಲಿ ರೇಶ್ಮೆ ಇಲಾಖೆಯಲ್ಲಿ ಕೆಲಸದಲ್ಲಿದ್ದರು. ಅವರ ಜಮೀನನ್ನು ಅವರೇ ಮಾಡುತ್ತಿದ್ದರು. 1 ನೇ ಪ್ರತಿವಾದಿಗೆ 2 ಜನ ಗಂಡು ಮಕ್ಕಳು. ನಾನು 1 ಪ್ರತಿವಾದಿಯೊಂದಿಗೆ ವಿಶ್ವಾಸದಿಂದ ಇದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ತಂದೆ ಚಲುವೇಗೌಡರಿಗೆ ಸೇರಿದ್ದವು. ದಿನಾಂಕ 05.04.1979 ರಂದು ಲೇಟ್ ಚಲುವೇಗೌಡರ 3 ಜನ ಮಕ್ಕಳು ವಿಭಾಗ ಮಾಡಿಕೊಂಡಿದ್ದೇವೆ ಎಂದರೆ ಸರಿ. ಆ ವಿಭಾಗ ಪತ್ರ ಒಂದೇ ಪತ್ರ ಮಾಡಿದ್ದರು. 3 ಪತ್ರ ಮಾಡಿರಲಿಲ್ಲ. ಮೂಲ ಪತ್ರವನ್ನು ಯಾರು ಇಟ್ಟುಕೊಳ್ಳುವುದು ಎಂದು ಪಂಚಾಯತಿಯಲ್ಲಿ ತೀರ್ಮಾನ ಆಯಿತು ಎಂದರೆ ಸಾಕ್ಷಿ ವಾದಿಯ ಮಾವ ಆ ಪತ್ರ ಬರೆದಿದ್ದರಿಂದ ಮೂಲ ಪತ್ರ ವಾದಿಯೇ ಇಟ್ಟುಕೊಂಡರು ಯಾರ ಬಳಿ ಇಟ್ಟುಕೊಳ್ಳಬೇಕೆಂದು ಪಂಚಾಯತಿಯಲ್ಲಿ ತೀರ್ಮಾನ ಆಗಿರಲಿಲ್ಲ. ವಾದಿಯ ಮಾವನ ಹೆಸರು ಮರಿಗೌಡ. ಅವರು ಈಗ ಜೀವಂತ ಇಲ್ಲ. ಚನ್ನೇಗೌಡ ಎಂಬುವವರು ಉಪಾಧ್ಯಾಯರು ಅವರು ನಮ್ಮ ಗ್ರಾಮದವರು. ಅವರು ನಮಗೆ ಸಂಬಂಧದಲ್ಲಿ ದೊಡ್ಡಪ್ಪನ ಮಗ ಆಗಬೇಕು ಆದ್ದರಿಂದ ವಿಶ್ವಾಸದಲ್ಲಿದ್ದೇವೆ. ವಿಭಾಗ ಪತ್ರವನ್ನು ಚನ್ನೇಗೌಡ ಬರೆದಿದ್ದಾರೆ ಎಂದರೆ ಸರಿಯಲ್ಲ. ವಿಭಾಗ ಪತ್ರ ಆದ ನಂತರ 1 ನೇ ಪ್ರತಿವಾದಿ ಪ್ರತ್ಯೇಕ ವಾಸ ಮಾಡಲು ಪ್ರಾರಂಭಿಸಿದರು ಎಂದರೆ ಸರಿ. ವಾದಿ ಮತ್ತು ನಾನು ವಿಭಾಗ ಆದ ನಂತರ 5 ವರ್ಷ ಒಟ್ಟಿಗೆ ಇದ್ದೆವು ನಂತರ ಪ್ರತ್ಯೇಕ ಪ್ರತ್ಯೇಕವಾಗಿ ವಾಸ ಮಾಡಲು ಪ್ರಾರಂಭಿಸಿದೆವು. ನಮ್ಮ ತಂದೆ ಯಾವಾಗ ತೀರಿ ಹೋದರು ಎಂದು ಖಚಿತ ದಿನಾಂಕ ಗೊತ್ತಿಲ್ಲ ಸುಮಾರು 10 ವರ್ಷದ ಹಿಂದೆ ತೀರಿ ಹೋಗಿದ್ದಾರೆ. ವಿಭಾಗ ಪತ್ರದಂತೆ 1 ನೇ ಪ್ರತಿವಾದಿಯ ಹೆಸರಿಗೆ ಸರ್ವೆ ನಂಬರ್ 4 ರಲ್ಲಿ 2 ಗುಂಟೆ ಹಿತ್ತಲ ಒಳ, ದೊಡ್ಡೋಲದಲ್ಲಿ 15 ರಲ್ಲಿ 20 ಗುಂಟೆ, ಗದ್ದೆ 18/1 ರಲ್ಲಿ 5 ಗುಂಟೆ, ಬಕರೆ ಹೊಲದಲ್ಲಿ 21 ರಲ್ಲಿ 1 ಎಕರೆ 8 ಗುಂಟೆ, ರೈಲು ಮಾರ್ಗದ ಹೊಲದಲ್ಲಿ ಸರ್ವೆ ನಂಬರ್ 28 ರಲ್ಲಿ 25 ಗುಂಟೆ, ಪಾಳು ಹೊಲದಲ್ಲಿ ಸರ್ವೆ ನಂಬರ್ 28 ರಲ್ಲಿ 5 ಗುಂಟೆ, ಬಾರೆ ಹೊಲದಲ್ಲಿ ಹಳೆ ಸರ್ವೆ ನಂಬರ್ 100 ಮತ್ತು ಹೊಸ ಸರ್ವೆ ನಂಬರ್ 107 ರಲ್ಲಿ 1 ಎಕರೆ ಆಸ್ತಿಗಳು 1 ನೇ ಪ್ರತಿವಾದಿ ರಾಮಚಂದ್ರರವರ ಹೆಸರಿಗೆ ಬಂದವು ಎಂದರೆ ಸರಿ. ಬಕರೆ ಹೊಲ ಸರ್ವೆ ನಂಬರ್ 21 ರಲ್ಲಿ 8 ಗುಂಟೆಯನ್ನು 1 ನೇ ಪ್ರತಿವಾದಿಗೆ ಜೇಷ್ಟಾಂಶಕ್ಕಾಗಿ ಹೆಚ್ಚಿಗೆ ಬಿಟ್ಟಿದ್ದರು ಎಂದರೆ ಸರಿ. ಸರ್ವೆ ನಂಬರ್ 4 ರಲ್ಲಿ 3 ಗುಂಟೆ, ತೋಟದ 15 ರಲ್ಲಿ 1 ವರೆ ಗುಂಟೆ, ಗುಡ್ಡೆ ಹೊಲ 15 ರಲ್ಲಿ 5 ಗುಂಟೆ, ಕೆಬ್ಬೆ ಹೊಲದಲ್ಲಿ 15 ರಲ್ಲಿ 16 ಗುಂಟೆ, ಹುಲ್ಮೇಳೆ ಹೊಲ 15 ರಲ್ಲಿ 20 ಗುಂಟೆ, ಗದ್ದೆಯಲ್ಲಿ 18/1 ರಲ್ಲಿ 5 ಗುಂಟೆ, 21 ರಲ್ಲಿ 33 ಗುಂಟೆ, ರೈಲು ಮಾರ್ಗದ ಹೊಲದಲ್ಲಿ 15 ರಲ್ಲಿ 15 ಗುಂಟೆ, ಬಾರೆ ಹೊಲದಲ್ಲಿ 95 ರಲ್ಲಿ 1 ಎಕರೆ ನನ್ನ ಹೆಸರಿಗೆ ಬರೆದಿತ್ತು

ಎಂದರೆ ಸಾಕ್ಷಿ ಸರ್ವೆ ನಂಬರ್ 95 ರಲ್ಲಿ ನನ್ನ ಹೆಸರಿಗೆ 2 ಎಕರೆ ಮೂಲ ಪತ್ರದಲ್ಲಿ ಬರೆದಿತ್ತು ಎಂದು ಹೇಳುತ್ತಾರೆ. ವಿಭಾಗ ಪತ್ರದಲ್ಲಿ ಯೋಗೇಗೌಡರ ಹಿಸ್ಸೆಗೆ ಸರ್ವೆ ನಂಬರ್4 ರಲ್ಲಿ 3 ಗುಂಟೆ, ತೋಟದ 15 ರಲ್ಲಿ 1 ವರೆ ಗುಂಟೆ, ಗುಡ್ಡೆ ಹೊಲ 15 ರಲ್ಲಿ 5 ಗುಂಟೆ, ಕೆಬ್ಬೆ ಹೊಲದಲ್ಲಿ 15 ರಲ್ಲಿ 16 ಗುಂಟೆ, ಹುಲ್ಮೇಳೆ ಹೊಲ 15 ರಲ್ಲಿ 20 ಗುಂಟೆ, ಗದ್ದೆಯಲ್ಲಿ 18/1 ರಲ್ಲಿ 6 ಗುಂಟೆ, ಬಕರೆ ಹೊಲ 29 ರಲ್ಲಿ 33 ಗುಂಟೆ, ರೈಲು ಮಾರ್ಗದ ಹೊಲದಲ್ಲಿ 15 ರಲ್ಲಿ 28 ಗುಂಟೆ, ಬರೆದಿತ್ತು ಎಂದರೆ ಸರಿ. ಬಾರೆ ಹೊಲ ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣ ಬರೆದಿತ್ತು ಎಂದರೆ ಸಾಕ್ಷಿ ಮೂಲ ಪತ್ರದಲ್ಲಿ 1 ಎಕರೆ ಬರೆದಿತ್ತು ಎಂದು ಹೇಳುತ್ತಾರೆ. ಸರ್ವೆ ನಂಬರ್ 21 ರಲ್ಲಿ ಯೋಗೇಗೌಡರ ಹಿಸ್ಸೆಗೆ ಇದ್ದ 4 ಗುಂಟೆ ಹೆಚ್ಚಿಗೆ ಜಮೀನನ್ನು 3 ಜನ ಅಣ್ಣತಮ್ಮಂದಿರು ಉಪಯೋಗಿಸಿಕೊಳ್ಳಲು ಇಡಲಾಗಿತ್ತು ಎಂದರೆ ಸರಿ. ದಿನಾಂಕ 05.04.1979 ರ ವಿಭಾಗ ಪತ್ರಕ್ಕೆ ನನ್ನ ತಂದೆ ಚಲುವೇಗೌಡ ಮತ್ತು ಅವರ ಮಕ್ಕಳುಗಳು ಸಹಿ ಮಾಡಿದ್ದೇವೆ. ಆ ಪತ್ರಕ್ಕೆ ಯೋಗೇಗೌಡರ ಮಾವ ಮರಿಗೌಡ, ಆನೇಕನ್ನಂಬಾಡಿಯ ದಾವೇಗೌಡರ ಮಗ ಪಟೇಲ್ ಮರಿಗೌಡ (ರಾಮಚಂದ್ರರವರ ಮಾವ), ದೇವರಮುದ್ದನಹಳ್ಳಿಯ ಯೋಗೇಗೌಡರ ಮಾವನ ಸಡಕ ಬಸವೇಗೌಡ ಎಂಬುವವರು ಸಹಿ ಮಾಡಿದ್ದಾರೆ. ನಮ್ಮ ಗ್ರಾಮದವರೇ ಆದ ಮರಿಗೌಡರ ಸಹಿ ಮಾಡಿದ್ದಾರೆ ಆ ಮರಿಗೌಡ ಈಗ ಜೀವಂತ ಇಲ್ಲ. ಸರ್ವೆ ನಂಬರ್ 95 ರಲ್ಲಿ 1 ಎಕರೆ ಎನ್ನುವುದನ್ನು 2 ಎಕರೆ ಎಂದು ಮಾಡಿದ್ದಾರೆ ಎಂದರೆ ಸಾಕ್ಷಿ ನಕಲು ವಿಭಾಗ ಪತ್ರವನ್ನು ನೋಡಿ ನನಗೆ ಸರಿಯಾಗಿ ಕಾಣುವುದಿಲ್ಲ ಎಂದು ಹೇಳುತ್ತಾರೆ. ಸರ್ವೆ ನಂಬರ್ 95 ರಲ್ಲಿ 2 ಎಕರೆ ಎಂದು ಬರೆದಿರುವುದನ್ನು 1 ಎಕರೆ ಎಂದು ತಿದ್ದಿದೆ ಎಂದರೆ ಸರಿ. ಪತ್ರ ತಿದ್ದಿರುವ ಬಗ್ಗೆ ಷರಾ ಬರೆದಿಲ್ಲ ಹಾಗೂ ನಮ್ಮ ಸಮಕ್ಷಮ ಬರವಣಿಗೆ ಮಾಡಿಲ್ಲ. ಖಾತೆ ಮಾಡಿಸಿಕೊಳ್ಳಲು ನಾನು ಮತ್ತು 1 ನೇ ಪ್ರತಿವಾದಿ ಇಬ್ಬರೇ ಹೋಗಿದ್ದೇವು ಎಂದರೆ ಸರಿಯಲ್ಲ. ಖಾತೆ ಮಾಡುವಾಗ 1 ನೇ ಪ್ರತಿವಾದಿಯ ಹೆಸರಿಗೆ ಇದ್ದ 2 ಗುಂಟೆ ಆಸ್ತಿಯ ಬದಲು 3 ಗುಂನಟೆ ಖಾತೆ ಮಾಡಿಸಿದ್ದೇವೆ ಎಂದರೆ ಸರಿಯಲ್ಲ. ಯೋಗೇಗೌಡರ ಹೆಸರಿಗೆ 3 ಗುಂಟೆ ಆಸ್ತಿಯ ಬದಲು 2 ಗುಂಟೆ ಖಾತೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ನಾವು ರೇಷ್ಮೆಯನ್ನು ಈಗ್ಗೆ 30 ವರ್ಷದಿಂದ ಮಾಡುತ್ತಿದ್ದೇವೆ ಸಾಕ್ಷಿ ಸ್ವತಃ ಮಧ್ಯದಲ್ಲಿ 2 ವರ್ಷ ಬಿಟ್ಟಿದ್ದೇವೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿಯು ಈಗ್ಗೆ 5-6 ವರ್ಷದಿಂದ ರೇಷ್ಮೆ ಕೃಷಿ ಮಾಡುತ್ತಿದ್ದಾರೆ. ಈ ದಾವೆ ದಾಖಲು ಮಾಡುವ ಪೂರ್ವದಲ್ಲಿ ನೀಡಿದ್ದ ಲಿಖಿತ ನೋಟಿಸ್ ಗೆ ನಾನು ಉತ್ತರ ಕೊಟ್ಟಿದ್ದೇನೆ. ನಾನು ನನ್ನ ಮರು ಉತ್ತರದಲ್ಲಿ ಹೊಸ ಸರ್ವೆ ನಂಬರ್ 107 ರಲ್ಲಿ ವಾದಿಗೆ 2 ಎಕರೆ ಬದಲು 1 ಎಕರೆ ಬರುತ್ತದೆ ಎಂದು ನೋಟಿಸ್ ನಲ್ಲಿ ನಮೂದಿಸಿಲ್ಲ. ನನ್ನ ಪ್ರತಿವಾದ ಪತ್ರದಲ್ಲಿ ವಾದಿಗೆ2 ಎಕರೆ ಬದಲು 1 ಎಕರೆ ಬರುತ್ತದೆ ಎಂದು ತಿಳಿಸಿಲ್ಲ. ನಾನು ಹಕ್ಕು ಘೋಷಣೆಗಾಗಿ ವಾದಿ ಮತ್ತು 1 ನೇ ಪ್ರತಿವಾದಿಯ ವಿರುದ್ಧ ದಾವೆ ಹಾಕಲು ತೊಂದರೆ ಇರಲಿಲ್ಲ. ಮೂಲ ವಿಭಾಗ ಪತ್ರದಲ್ಲಿ ಸರ್ವೆ ನಂಬರ್95 ರಲ್ಲಿ ವಾದಿ ವಿದ್ಯಾವಂತ ಅಲ್ಲ ಎಂದು 2 ಎಕರೆ ವಿಸ್ತೀರ್ಣವನ್ನು ಬಿಡಲಾಗಿತ್ತು ಎಂದರೆ ಸರಿಯಲ್ಲ. 1979 ರಿಂದ ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣದಲ್ಲಿ ವಾದಿಯೇ ಬೇಸಾಯ ಮಾಡಿಕೊಂಡು ಸ್ವಾಧೀನಾನುಭವ ಹೊಂದಿಕೊಂಡಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿ ಸ್ವತಃ ಈಗ್ಗೆ 5-6 ವರ್ಷದ ಹಿಂದೆ ಮಾವಿನ ಗಿಡ ಹಾಕಿದ್ದೇವೆ ಎಂದು ಹೇಳುತ್ತಾರೆ. ನಾನು ಮಾವಿನ ಗಿಡ ಹಾಕಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. ವಿಭಾಗ ಪತ್ರ ಮಾಡಿಕೊಂಡ ಒಂದು ವಾರ 15 ದಿನಗಳ ಒಳಗೆ ಖಾತೆ ಮಾಡಿಸಿಕೊಂಡೆವು. ಖಾತೆ ಮಾಡಿಸಿದ ಮ್ಯುಟೇಶನ್ ನ್ಯಾಯಾಲಯಕ್ಕೆ ಕೊಟ್ಟಿಲ್ಲ. ವಿಭಾಗ ಪತ್ರ ಮಾಡಿಕೊಂಡ 10 ವರ್ಷಗಳ ನಂತರ ಎಂ.ಆರ್. 32/1988-89 ರಂತೆ ಖಾತೆ ಮಾಡಿಸಿಕೊಂಡಿದ್ದೀರಾ ಎಂದರೆ ಸರಿಯಲ್ಲ. ನನ್ನ ಬಳಿ ಮೂಲ ವಿಭಾಗ ಪತ್ರ ಇದೆ ಎಂದರೆ ಸರಿಯಲ್ಲ ನಾನೇ ಮೂಲ ವಿಭಾಗ ಪತ್ರ ತಿದ್ದಿ

ಖಾತೆ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ರಲ್ಲಿ 2 ಎಕರೆ ಇದ್ದುದನ್ನು 1 ಎಕರೆ ಎಂದು ನಾನೇ ತಿದ್ದಿ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಹಿಸ್ಸೆಗೆ ಬಂದ ಆಸ್ತಿಗಳನ್ನು ಮೂಲ ವಿಭಾಗ ಪತ್ರದಲ್ಲಿ ತಿದ್ದುಪಡಿ ಮಾಡಿಲ್ಲ ಎಂದರೆ ಸರಿ. ಮೂಲ ವಿಬಾಗ ಪತ್ರದಲ್ಲಿ ಸರ್ವೆ ನಂಬರ್98 ರಲ್ಲಿ ವಾದಿ ಮತ್ತು ನನ್ನ ಹಿಸ್ಸೆಗೆ ಬಂದ ವಿಸ್ತೀರ್ಣವನ್ನು ತಿದ್ದುಪಡಿ ಮಾಡಿದ್ದೇವೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಬೇರೆ ವಕೀಲರನ್ನು ನೇಮಿಸಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಜೊತೆ 1 ನೇ ಪ್ರತಿವಾದಿ ಬಂದಿಲ್ಲ ಎಂದರೆ ಸರಿ. 1 ನೇ ಪ್ರತಿವಾದಿ ಯಾವ ಕಾರಣಕ್ಕಾಗಿ ತಕರಾರನ್ನು ಸಲ್ಲಿಸಿಲ್ಲ ಎಂದು ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿಯು ಈ ದಾವೆಯಲ್ಲಿ ನಾನು ಮೂಲ ವಿಭಾಗ ಪತ್ರವನ್ನು ತಿದ್ದಿರುವುದರಿಂದ ಅವರೇ ಸರಿಪಡಿಸಿಕೊಳ್ಳಲಿ ಎಂದು ತಕರಾರು ಹಾಕಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿ ಯಾವ ಕಾರಣ ನ್ಯಾಕ್ಕೆ ಬಂದಿಲ್ಲ ಎಂದರೆ ಸಾಕ್ಷಿ ಸ್ವತಃ ಮಾಡಿರುವುದು ಸರಿಯಾಗಿದೆ ಎಂದು 1 ನೇ ಪ್ರತಿವಾದಿ ಬಂದಿಲ್ಲ ಎಂದು ಹೇಳುತ್ತಾರೆ. ವಾದಿಯ ವಿರುದ್ದ ನಾನು ಯಾವುದೇ ಫಿರ್ಯಾದನ್ನು ಕೊಟ್ಟಿಲ್ಲ. ಸಾಕ್ಷಿ ಸ್ವತಃ ಸರ್ವೆ ನಂಬರ್ 95 ರಲ್ಲಿ ಈ ಹಿಂದೆ ಮಾವಿನ ಗಿಡಕ್ಕೆ ದನ ಬಿಟ್ಟಿದ್ದರಿಂದ ದೂರು ಕೊಟ್ಟಿದ್ದೇನೆ ಎಂದು ಹೇಳುತ್ತಾರೆ. ಆ ದೂರಿನ ನಕಲನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ. 1979 ರಿಂದ ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣ ವಾದಿಯ ಸ್ವಾದೀನಾನುಭವದಲ್ಲಿ ಇದೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣವನ್ನು ನನ್ನ ಮಕ್ಕಳುಗಳ ಹೆಸರಿಗೆ ಮಾಡಿ ಅಳತೆ ಮಾಡಿಸಲು ಹೋದಾಗ ವಾದಿಯು ತಕರಾರು ಮಾಡಿದರು ಎಂದರೆ ಸಾಕ್ಷಿ 1 ಮಾರು ಹೆಚ್ಚಿಗೆ ಅಳತೆ ಮಾಡಿದ್ದೀರಾ ಎಂದು ತಕರಾರು ಮಾಡಿದ್ದಾರೆ ಎಂದು ಹೇಳುತ್ತಾರೆ. ಆಗ ವಾದಿ ಕಂದಾಯ ದಾಖಲೆಗಳನ್ನು ತೆಗೆಸಿ ನೋಡಿದಾಗ ಸರ್ವೆ ನಂಬರ್ 95 ರಲ್ಲಿ 2 ಎಕರೆ ಬದಲು 1 ಎಕರೆ ಆಗಿತ್ತು ಎಂದು ಅವರ ಗಮನಕ್ಕೆ ಬಂದಿರುಎತ್ತದೆ ಎಂದರೆ ಸಾಕ್ಷಿ ತನ್ನ ತಂದೆ ಇದ್ದಾಗಲೇ ಅದನ್ನು ಕೇಳಬಹುದಿತ್ತು ಎಂದು ಹೇಳುತ್ತಾರೆ. ವಾದಿಯು ಈ ಬಗ್ಗೆ ನನ್ನನ್ನು ಕೇಳಿದ್ದಾರೆ ಎಂದರೆ ಸರಿಯಲ್ಲ. ಸರ್ವೆ ನಂಬರ್ 95 ರಲ್ಲಿ 2 ಎಕರೆ ವಿಸ್ತೀರ್ಣಕ್ಕೆ ನಾನು ತಕರಾರು ಮಾಡಿದ್ದೇನೆ ಎಂದರೆ ಸರಿಯಲ್ಲ. ಗ್ರಾಮದಲ್ಲಿ ಪಂಚಾಯತಿ ಸೇರಿಸಿ ನನಗೆ ಬುದ್ದಿವಾದ ಹೇಳಿಸಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲು ಮಾಡಲು ಕಾಲಾವಕಾಶ ಕೋರಿದ್ದಾರೆ ಪಾಟೀಸವಾಲು ಮಾಡಲು ಕಾಲಾವಕಾಶ ನೀಡಲಾಯಿತು.

**ಮರು ವಿಚಾರಣೆಃ ಇಲ್ಲ**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಜೆಎಂಎಫ್‌ಸಿ., ಹೊಳೆನರಸೀಪುರ.